# ಪತ್ರಿಕಾ ಪ್ರಕಟಣೆ

## ಅನಧಿಕೃತ ಮತ್ತು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿತರ ಬಂಧನ

ಮಾನ್ಯ ಶ್ರೀ ಎನ್.ಎಸ್. ರವಿಕುಮಾರ, ಐ.ಪಿ.ಎಸ್., ಪೊಲೀಸ್ ಆಯುಕ್ತರು ಕಲಬುರಗಿ ನಗರ, ಮಾನ್ಯ ಶ್ರೀ ಅಡ್ಡೂರ ಶ್ರೀನಿವಾಸಲು, ಐ.ಪಿ.ಎಸ್., ಉಪ ಪೊಲೀಸ್ ಆಯುಕ್ತರು, ಕಾನೂನು ಮತ್ತು ಸುವ್ಯವಸ್ಥೆ, ಕಲಬುರಗಿ ನಗರ ರವರ ಮಾರ್ಗ ದರ್ಶನದಲ್ಲಿ,

ಶ್ರೀ ವಾಜೀದ ಪಟೇಲ ಪಿ.ಐ., ಸಿ.ಸಿ.ಬಿ. ಘಟಕ, ಕಲಬುರಗಿ ನಗರ ಮತ್ತು ಮಾನ್ಯ ತಹಸೀಲ್ದಾರರು ಕಲಬುರಗಿ ಆದ ಶ್ರೀ ವೆಂಕಣ್ಣಗೌಡ ಬಿ. ಪಾಟೀಲ ಹಾಗೂ ಪಂಚರಾದ 1) ಶ್ರೀ ಗುರುಪ್ರಸಾದ ತಂದೆ ಸಿದ್ದಯ್ಯ ಮಠ, ಉ:ಕಂದಾಯ ನಿರೀಕ್ಷಕರು, ಕಲಬುರಗಿ-1, ತಹಸೀಲ್ ಕಛೇರಿ, ಕಲಬುರಗಿ, 2) ಶ್ರೀ ಸಂತೋಷ ತಂದೆ ನಾಗಪ್ಪ ಯಡ್ರಾಮಿ, ಉ:ದ್ವಿತೀಯ ದರ್ಜೆ ಸಹಾಯಕರು, ತಹಸೀಲ್ ಕಛೇರಿ, ಕಲಬುರಗಿ, ಮತ್ತು ಶ್ರೀ ಶಶಿಧರ ದೇವದುರ್ಗ ತೂಕ ಮತ್ತು ಅಳತೆ ಮಾಡುವವರು ಹಾಗೂ ಸಿ.ಸಿ.ಬಿ. ಘಟಕದ ಸಿಬ್ಬಂದಿಯವರಾದ 1) ರವೀಂದ್ರಕುಮಾರ ಸಿ.ಹೆಚ್.ಸಿ-48, 2) ವೇದರತ್ನಂ ಸಿ.ಹೆಚ್.ಸಿ-51, 3) ಮಲ್ಲಿಕಾರ್ಜುನ ಸಿ.ಹೆಚ್.ಸಿ-79, 4) ಶರಣಬಸಪ್ಪ ಸಿ.ಹೆಚ್.ಸಿ-94, 5) ಕೇಸುರಾಯ ಸಿ.ಹೆಚ್.ಸಿ-223, 6) ಸುನೀಲಕುಮಾರ ಸಿ.ಹೆಚ್.ಸಿ-167, 7) ಯಲ್ಲಪ್ಪ ಸಿಪಿಸಿ-220, 8) ಶಿವಕುಮಾರ ಸಿಪಿಸಿ-16715, 9) ಅಶೋಕ ಕಟಕೆ ಸಿಪಿಸಿ-966, 10) ಅಶೋಕ ಸಿಪಿಸಿ-647, 11) ರಾಜಕುಮಾರ ಸಿಪಿಸಿ-1100, 12) ವಿಶ್ವನಾಥ ಸಿಪಿಸಿ-686, 13) ಅರವಿಂದ ಸಿಪಿಸಿ-955, 14) ನಾಗರಾಜ ಸಿಪಿಸಿ-1257 ರವರು ಕೂಡಿ ಕಲಬುರಗಿ ನಗರದ ಎಂ.ಎಸ್.ಕೆ. ಮಿಲ್ ಗ್ರೌಂಡ ಖುಲ್ಲಾ ಮೈದಾನದಲ್ಲಿ 3 ಜನರು ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದಾಗ ದಾಳಿ ಮಾಡಿ ಆರೋಪಿತರಾದ **1) ಭೀಮ ತಂದೆ ನಾರಾಯಣ ಹೊನ್ನಳ್ಳಿ, ವ:32 ವರ್ಷ, ಜಾತಿ:ಬೇಡರ, ಉ:ಖಾಸಗಿ ಕೆಲಸ, ಸಾ:ದಾಗತೆವಾಡಿ, ತಾ:ಉಮರ್ಗಾ, ಜಿ:ಉಸ್ಮಾನಾಬಾದ, 2) ಧರ್ಮರಾಜ ತಂದೆ ನಿಂಗಪ್ಪ ಬೇವಿನಕಟ್ಟಿ, ವ:23 ವರ್ಷ, ಉ:ವಿದ್ಯಾರ್ಥಿ, ಜಾತಿ:ಬೇಡರ, ಸಾ:ಬಾಣತಿಹಾಳ, ತಾ:ಶಹಾಪೂರ, ಜಿ:ಯಾದಗಿರಿ ಇವರು ಸಿಕ್ಕಿ ಬಿದ್ದಿದ್ದು, ಇನ್ನೊಬ್ಬ ಆರೋಪಿತನಾದ 3) ಲಕ್ಷ್ಮಣ ತಂದೆ ವೆಂಕಟ ಸೀತಾಳಗೇರೆ, ವ:36 ವರ್ಷ, ಜಾತಿ:ಬೇಡರ, ಉ:ಖಾಸಗಿ ಕೆಲಸ, ಸಾ:ದಾಗತೆವಾಡಿ, ತಾ:ಉಮರ್ಗಾ, ಜಿ:ಉಸ್ಮಾನಾಬಾದ ಈತನು ಓಡಿ ಹೋಗಿದ್ದು ಇರುತ್ತದೆ.** ಸದರಿ ಆರೋಪಿತರ ಹತ್ತಿರ **ಒಟ್ಟು 23 ಕೆ.ಜಿ. ಗಾಂಜಾ ದೊರೆತಿದ್ದು, ಪ್ರತಿ ಕೆ.ಜಿ.ಗೆ ರೂ.10,000/- ರಂತೆ ಒಟ್ಟು 23 ಕೆ.ಜಿ. ಗಾಂಜಾಕ್ಕೆ ಅ.ಕಿ.ರೂ.2,30,000/-** ಮತ್ತು **2 ಮೊಬೈಲಗಳು ಅ.ಕಿ. ರೂ.20,000/-** ಮತ್ತು **ರೂ.2800/- ನಗದು ಹಣ ಹಾಗೂ ಒಂದು ಪಲ್ಸರ್ 150 ಮೋಟಾರಸೈಕಲ್ ನಂ. MH-25-AX-2954 ಅ.ಕಿ. ರೂ.1,50,000/-** ಇವುಗಳನ್ನು ಜಪ್ತುಪಡಿಸಿಕೊಂಡು ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿರುತ್ತಾರೆ.

ಸದರಿ ದಾಳಿಯನ್ನು ಯಶಸ್ವಿಯಾಗಿ ಕೈಕೊಂಡಿರುವುದಕ್ಕೆ ಸಿ.ಸಿ.ಬಿ. ಘಟಕದ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ಮಾನ್ಯ ಪೊಲೀಸ್ ಆಯುಕ್ತರು, ಕಲಬುರಗಿ ನಗರ ರವರು ಶ್ಲಾಘಿಸಿರುತ್ತಾರೆ.